ಉಂಟು. ಸರಿಯಾದ ವಿಮರ್ಶೆ ಬಾರದೇ ಇರಲು ಇಂಥದ್ದೇ ಕಾರಣ ಎನ್ನಲಾಗದು. ಹಿಂದೆ ಬೆರಳೆಣಿಕೆ ಪತ್ರಿಕೆಗಳು ಇದ್ದಾಗ ಕೃತಿಯ ಬಗ್ಗೆ ವಿಸ್ತೃತ ವಿಮರ್ಶೆಗಳು ಬರುತ್ತಿದ್ದವು. ಈಗ ಪತ್ರಿಕೆಗಳು ಜಾಸ್ತಿಯಾಗಿವೆ. ಆದರೆ ಅವುಗಳಲ್ಲಿ ವಿಮರ್ಶೆಗೆ ಜಾಗ ಕಡಿಮೆಯಾಗಿದೆ. ಫೇಸ್‌ಬುಕ್, ವಾಟ್ಸ್‌ಆ್ಯಪ್ ಗ್ರೂಪುಗಳಲ್ಲಿ ಕೃತಿಗಳ ವಿಮರ್ಶೆ ಹರಿದಾಡುತ್ತಿದೆ. ಈ ಕಾಲಘಟ್ಟದಲ್ಲಿ ತಂತ್ರಜ್ಞಾನ ವಿಮರ್ಶೆಗಳಿಗೆ ಜಾಗ ಮಾಡಿಕೊಟ್ಟಿದೆ.

**2** ವಿಮರ್ಶೆ ಬರಲೇ ಬೇಕು ಎಂದು ಒತ್ತಾಯಿಸುವುದು ಅಥವಾ ದೂರುವುದು ಸರಿಯಲ್ಲ. ವಿಮರ್ಶಕ ಸಾಹಿತಿಗಿಂತ ಹೆಚ್ಚು ತಿಳಿದವನಾಗಿರಬೇಕು. ತೌಲನಿಕ ವಿಮರ್ಶೆ ಬಲ್ಲವನಾಗಿರಬೇಕು. ಇಂತಹ ಬೆರಳೆಣಿಕೆಯ ವಿಮರ್ಶಕರು ಎಷ್ಟು ಪುಸ್ತಕಗಳನ್ನು ಓದಲು ಸಾಧ್ಯ? ಓದಿದ ಎಲ್ಲಾ ಪುಸ್ತಕಗಳ ಬಗ್ಗೆ ವಿಮರ್ಶೆ ಬರೆಯಲಾಗುವುದೇ? ಬರೆದರೂ ಅವನ್ನು ಪ್ರಕಟಿಸುವವರು ಯಾರು? ಎನ್ನುವ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ.

**3** ಈಗಿನ ಲೇಖಕರು ತಮ್ಮ ಕೃತಿಗೆ ವಿಮರ್ಶೆ ಬರುತ್ತಿಲ್ಲ ಎಂದು ದೂರುತ್ತಿಲ್ಲ. ಓದುಗರು ಕೃತಿಯ ವಿಮರ್ಶೆ ನೋಡಿ ಪುಸ್ತಕಗಳನ್ನು ಕೊಳ್ಳುವುದಿಲ್ಲ. ಪ್ರತಿಯೊಬ್ಬ ಓದುಗನಿಗೂ ಆತನ ಇಷ್ಟದ ಲೇಖಕರ ಒಂದು ಪಟ್ಟಿ ಇರುತ್ತದೆ. ಅಂತಹವರ ಪುಸ್ತಕ ಪ್ರಕಟವಾದ ಕೂಡಲೇ ಅವರು ಕೊಂಡು ಓದಿ ತಮ್ಮ ಸಾಹಿತ್ಯಾಸಕ್ತ ಸ್ನೇಹಿತರಿಗೂ ತಿಳಿಸುತ್ತಾರೆ. ಪುಸ್ತಕ ವಿಮರ್ಶೆಗೆ ಮತ್ತು ವಿಮರ್ಶಕರಿಗೆ ಇದೇ ಮೂರ್ನಾಲ್ಕು ದಶಕಗಳ ಹಿಂದೆ ಇದ್ದ ಪ್ರಾಮುಖ್ಯತೆ ಈಗ ಇಲ್ಲವೇನೋ ಅನಿಸುತ್ತದೆ.

**4** ವಿಮರ್ಶಕರು ಹೊಸ ತಲೆಮಾರಿನ ಲೇಖಕರ ಬಗ್ಗೆ ಬರೆದಿದ್ದಾರೋ ಇಲ್ಲವೋ ಎಂಬುದರಿಂದ ಹೊಸ ಲೇಖಕರ ಕೃತಿಗಳ ಮೌಲ್ಯಮಾಪನ ಮಾಡಲಾಗದು. ಎಷ್ಟೊ ಬಾರಿ ಹೊಸ ಲೇಖಕರ ಪುಸ್ತಕಗಳತ್ತ ವಿಮರ್ಶಕರ ದೃಷ್ಟಿಯೂ ಹೋಗಿರುವುದಿಲ್ಲ. ಇನ್ನು ಪುಸ್ತಕ ಆಯ್ಕೆಯಲ್ಲಿ ವಿಮರ್ಶಕನ ಆಸಕ್ತಿ, ಅಭಿರುಚಿ, ಸಿದ್ಧಾಂತ, ಪ್ರಭಾವಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಪ್ರಕಟವಾದ ಎಲ್ಲ ಸಾಹಿತ್ಯವನ್ನು ಓದುವುದೇ ಸಾಧ್ಯವಿಲ್ಲದಿರುವಾಗ ಅವುಗಳ ಬಗ್ಗೆ ಬರೆಯುವುದು ಹೇಗೆ ಸಾಧ್ಯ?

**5** ಕೆಲವು ಉತ್ತಮ ವಿಮರ್ಶೆಗಳಿಂದ ಕೆಲವು ಲೇಖಕರ ಬರೆಯುವ ರೀತಿಯ ಮೇಲೆ ಪರೋಕ್ಷ ಪರಿಣಾಮ ಉಂಟಾಗುವ ಸಂಭವವಿದೆ. ಆದರೆ ಸಾಹಿತಿಗಳು ದೇಶ ವಿದೇಶದ ಇತರರ ಕೃತಿಗಳನ್ನು ಓದಿದ್ದರಿಂದಲೂ ಈ ಬದಲಾವಣೆ ಆಗಿರಬಹುದು.

**6** ಒಂದು ವೇಳೆ ವಿಮರ್ಶೆಯೇ ಇರದಿದ್ದರೆ ಏನೂ ಆಗುವುದಿಲ್ಲ. ಆದರೆ ಸಾಹಿತ್ಯ ಇದ್ದರಷ್ಟೇ ವಿಮರ್ಶೆಗೆ ಕೆಲಸ. ಆ ವಿಮರ್ಶೆ ಕಾಲೇಜು, ವಿವಿಗಳಲ್ಲಿ ಸಾಹಿತ್ಯವನ್ನು ಓದಿಕೊಂಡ, ಪತ್ರಿಕೆಗಳಲ್ಲಿ ಪ್ರಕಟವಾದ, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧವೇ ಆಗಿರಬೇಕೆಂದೇನೂ ಇಲ್ಲ. ಒಬ್ಬ ಓದುಗ ತಾನು ಓದಿದ ಕೃತಿಯ ಬಗ್ಗೆ ಅದನ್ನು ಬರೆದ ಸಾಹಿತಿಗೆ ಬರೆದ ನಾಲ್ಕು ಸಾಲಿನ ಪತ್ರವೂ ಆಗಿರಬಹುದು.

**7** ನಾನು ಒಬ್ಬ ಓದುಗ ಅಷ್ಟೇ. ಯಾವುದೇ ಪುಸ್ತಕವನ್ನು ಬರೆದಿಲ್ಲ.

ಲೇಖಕರು ನಿವೃತ್ತ ಪೋಸ್ಟ್ ಮಾಸ್ಟರ್. ಕನ್ನಡ ಸಾಹಿತ್ಯದ ಓದುಗ.
ಪ್ರಸ್ತುತ ಬೆಂಗಳೂರಿನಲ್ಲಿ ವಾಸ.